


ರಕ್ತಸ್ರಾವ ನಿಲ್ಲುವುದಿಲ್ಲ ಎಂದು ವೈದ್ಯರು ಹೇಳಿದರು. ನನ್ನ ಮಾತಿಗೂ ಕಾಯದೆ ಅರಿವಳಿಕೆಯ ಮದ್ದು ಚುಚ್ಚಿ ಟೈಲರಿಂಗ್ ಕೆಲಸ ಪ್ರಾರಂಭಿಸಿದರು. ಅಷ್ಟರಲ್ಲಿ ಮತ್ತೊಬ್ಬ ಡಾಕ್ಟರ್ ಬಂದು ನನ್ನನ್ನು ಗುರುತಿಸಿದರು.

'ಅರೇ! ನರಸಿಂಹಮೂರ್ತಿಯವರು ಅಲ್ವಾ? ಒಳ್ಳೇ ಭಾಷಣ ಮಾಡ್ತೀರ ಸರ್' ಎಂದು ಸೂಜಿ ಹಿಡಿದಿದ್ದ ವೈದ್ಯರಿಗೆ, 'ಎಷ್ಟು ಹಾಕಿದ್ದೀರ ಹೊಲಿಗೆ?'

'ಎಂಟು' ಎಂದರು ಅವರು.

'ನನ್ನ ಕಡೆಯಿಂದ ಎರಡು ಹೊಲಿಗೆ ಜಾಸ್ತಿ ಹಾಕಿ, ಫ್ರೀಯಾಗಿ' ಎಂದರು. ಒಟ್ಟು ಹತ್ತು ಹೊಲಿಗೆ ಒಳತುಟಿಗೆ ಬಿತ್ತು. ತುಟಿ ಸರಿ ಹೋಯಿತು. ಮುಂದಿನ ಸರದಿ ಅಲ್ಲಾಡುತ್ತಿದ್ದ ಹಲ್ಲುಗಳಿಗೆ.

ಖ್ಯಾತ ದಂತ ತಜ್ಞ ಡಾಕ್ಟರ್ ನಾಗೇಶ್ ಬಳಿಗೆ ಬಂದೆ. ಅವರು ಸಾಹಿತ್ಯ ಪ್ರಿಯರು, ಸಹಾಯ ಜೀವಿಗಳು. ನನ್ನ ಅವಸ್ಥೆ ನೋಡಿ, 'ದೇವರೇ, ಎಂ.ಎಸ್.ಎನ್. ಹಲ್ಲುಗಳು ಅವರ ಬಾಯಲ್ಲೇ ಉಳಿಯಲಿ' ಎಂದು ಫ್ರೀ ಎಕ್ಸ್‌ರೇ ತೆಗೆದರು. ಮೇಲೆ ಮೂರು ಹಲ್ಲು, ಕೆಳಗೆ ಮೂರು ಹಲ್ಲು 'ಸರಿ, ನಾನು ಹೋಗಿ ಬರುವೆ' ಎಂದು ಹಾಡುತ್ತಿತ್ತು.

'ಕೂಡಲೇ ನೀವು ಡಾ. ಶ್ರೀನಾಥ್ ಅವರನ್ನು ನೋಡಿ' ಎಂದು ಮತ್ತೊಂದು ನರ್ಸಿಂಗ್ ಹೋಂಗೆ ಶಿಫಾರಸು ಪತ್ರದೊಂದಿಗೆ ಕಳಿಸಿದರು. ಖ್ಯಾತ ವೈದ್ಯ ಡಾ. ಶ್ರೀನಾಥ್ ಅವರ ಅಪಾಯಿಂಟ್‌ಮೆಂಟ್ ಸಿಗಬೇಕಾದರೆ ಮುಖ ಗುದ್ದಿರಲೇಬೇಕು. ಅವರು ನನ್ನನು ಗುರುತಿಸಿ ನಕ್ಕರು.

'ನಿಮ್ಮ ಬಗ್ಗೆ ಕೇಳಿದ್ದೆ, ನೀವು ಬಂದಿದ್ದು ಸಂತೋಷವಾಯಿತು. ಆದರೆ, ಇಲ್ಲಿ ಈ ಸ್ಥಿತೀಲಿ ನೋಡಿದ್ದು ನನಗೆ ಬೇಜಾರಾಗ್ತಿದೆ, ನೀವು ನಿನ್ನೆ ಬರಬೇಕಿತ್ತು' ಎಂದರು. ನಾನು ಹೆಚ್ಚು ಮಾತಾಡುವ ಸ್ಥಿತೀಲಿ ಇರಲಿಲ್ಲ. 'ಏನೂ ಯೋಚ್ನೆ ಮಾಡ್ಬೇಡಿ. ನಿಮ್ಮ ಯಾವ ಹಲ್ಲೂ ಆಚೆಗೆ ಹೋಗದಂತೆ ನಾನು ಭದ್ರ ಪಡಿಸುತ್ತೇನೆ' ಎಂದರು.

'ಥ್ಯಾಂಕ್ಯೂ ಡಾಕ್ಟರ್!' ಎಂದೆ.

'ನೀವು ಭಾಷಣಕಾರರು. ನಿಮ್ಮ ಹಲ್ಲು ನೀವೇ ಉದುರಿಸಿಕೊಳ್ಳುವುದು ತಪ್ಪಾಗುತ್ತದೆ. ಅದಕ್ಕಾಗಿ ಬೇರೆ